

# ಸತ್ಯದ ಎದುರು ಸುಳ್ಳು ಬದುಕಲ್ಲ

■ ಅರವಿಂದ ಜಿ. ಜೋಷಿ
ಚಿತ್ರ: ಸಂತೋಷ್ ಸಸಿಹಿತ್ಲು

ಒಂದೂರಲ್ಲಿ ಮುನಿ ಎಂಬ ದೊಡ್ಡ ವ್ಯಾಪಾರಿ ಇದ್ದ. ನ್ಯಾಯ, ನೀತಿಯಿಂದ ವ್ಯಾಪಾರ ಮಾಡುತ್ತಿದ್ದರಿಂದ ಎಲ್ಲರಿಗೂ ಬೇಕಾದವನಾಗಿದ್ದ. ವರ್ಷದ ಹಿಂದೆ ಹರಿ ಎಂಬ ಬಾಲಕ ಕೆಲಸ ಕೇಳಿಕೊಂಡು ಬಂದಿದ್ದ. ಹರಿಯ ಸೌಮ್ಯ ಮಾತು ಕಂಡ ಮುನಿ ಆತನಿಗೆ ತನ್ನ ಅಂಗಡಿಯಲ್ಲಿ ಕೆಲಸ ಕೊಟ್ಟ. ಶುರುವಿನಲ್ಲಿ ಅಂಗಡಿಯ ಒಳ–ಹೊರಗೆ ಶುಚಿಗೊಳಿಸಿ, ಸಾಮಾನುಗಳನ್ನು ನೀಟಾಗಿ ಜೋಡಿಸುವಂತಹ ಪುಟ್ಟ ಪುಟ್ಟ ಕೆಲಸ ವಹಿಸಿದ. ತನ್ನ ಕೆಲಸಗಳನ್ನು ಆತ ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುತ್ತಿದ್ದ.

ಇದನ್ನು ಗಮನಿಸಿದ ಮುನಿಗೆ ಆತನಲ್ಲಿ ವಿಶ್ವಾಸ ಮೂಡಿತು. ಕೆಲಸದ ನಿಮಿತ್ತ ಆಚೆ ಹೋಗುವಾಗಲೆಲ್ಲ ಅಂಗಡಿ ಜವಾಬ್ದಾರಿಯನ್ನು ಸಂಪೂರ್ಣ ಹರಿಗೆ ಕೊಟ್ಟು ಹೋಗುತ್ತಿದ್ದ. ಹರಿಯೂ ವಿನಯದಿಂದ ಚೆನ್ನಾಗಿ ವ್ಯಾಪಾರ ಮಾಡುತ್ತಿದ್ದ. ಇದರಿಂದ ಮುನಿಗೆ ವಿಶ್ವಾಸ ಇನ್ನೂ ಹೆಚ್ಚಾಯಿತು. ಕೆಲವು ತಿಂಗಳು ಉರುಳಿದವು. ಬಾಲು ಎಂಬ ಯುವಕ ಮುನಿ ಬಳಿ ಬಂದು, ತಾನು ಬಡವ, ಊಟಕ್ಕೂ ಗತಿ ಇಲ್ಲ, ಕೆಲಸ ಕೊಡಿ ಎಂದು ಬೇಡಿದ. ಬಾಲು ನೋಡಲು ಗಟ್ಟಿಮುಟ್ಟಾಗಿದ್ದ. ಆತನಿಗೆ ಲಾರಿಯಿಂದ ಮೂಟೆ ಬಂದಾಗ ಇಳಿಸಿ ಗೋದಾಮಿನಲ್ಲಿ ಜೋಡಿಸುವ ಕೆಲಸದ ಜೊತೆಗೆ ಅಂಗಡಿ ಒಳಗೆ ಹೊರಗೆ ಸ್ವಚ್ಛಗೊಳಿಸುವ ಕೆಲಸ ವಹಿಸಿದ. ಮೊದಲಿನ ಆರು ತಿಂಗಳು ಬಾಲು, ತನ್ನ ಕೆಲಸದಲ್ಲಿ ಯಾವ ಲೋಪವೂ ಬಾರದಂತೆ ಮಾಡುತ್ತಿರುವುದನ್ನು ಕಂಡ ಮುನಿ ಹರಿ ಇರುವ ರೂಮಿನಲ್ಲಿ ವಾಸಕ್ಕೆ ಅವಕಾಶ ಮಾಡಿಕೊಟ್ಟ. ಈ ತನಕ ಒಂಟಿಯಾಗಿದ್ದ ಹರಿಗೆ ಒಬ್ಬ ಗೆಳೆಯ ಸಿಕ್ಕಾಗ ಖುಷಿ ಪಟ್ಟಿದ್ದ. ಇಬ್ಬರೂ ತಮ್ಮ ತಮ್ಮ ಕಷ್ಟ ಸುಖ ಹಂಚಿಕೊಂಡು ಕಾಲ ಕಳೆಯತೊಡಗಿದ್ದರು.

ಸ್ವಭಾವದಲ್ಲಿ ಹರಿ ತುಂಬಾ ಮೆದು, ಭೋಳೆ ತನದವನಾಗಿದ್ದ. ಆದರೆ ಬಾಲು ಇದಕ್ಕೆ ತದ್ವಿರುದ್ಧವಾಗಿದ್ದ. ತನ್ನ ಕೆಲಸ ಆಗಬೇಕೆಂದರೆ ಸಣ್ಣ ಪುಟ್ಟ ಸುಳ್ಳು ಹೇಳುವುದನ್ನು ರೂಢಿಸಿಕೊಂಡಿದ್ದ. ಇದು ಸರಿ ಅಲ್ಲ, ಮುಂದೆ ನಮಗೇ ಅದು ಮಾರಕ ವಾಗುತ್ತದೆ ಎಂದು ಸುಮಾರು ಬಾರಿ ಹರಿ ಹೇಳಿದರೂ, ಆತ ಕಿವಿಗೊಡುತ್ತಿರಲಿಲ್ಲ. ಈ ವಿಷಯ ಮುನಿ ಕಿವಿಗೆ ಬಿದ್ದು ಆತ ಬಾಲುವಿನ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸತೊಡಗಿದ್ದ.

ಒಮ್ಮೆ ತುರ್ತು ಕೆಲಸದ ನಿಮಿತ್ತ ಮುನಿ ಊರಿಗೆ ಹೊರಟ್ಟಿದ್ದ. ಹೋಗುವ ಮುನ್ನ ಎಂಬತ್ತು ಸಾವಿರ ರೂಪಾಯಿ ಬ್ಯಾಂಕ್‌ನಿಂದ ಡ್ರಾ ಮಾಡಿಕೊಂಡು ಬರಲು ಹರಿಗೆ ಹೇಳಿದ್ದ. ಹರಿ ಆ ಹಣ ಡ್ರಾ ಮಾಡಿಕೊಂಡು ಬಂದು ತನ್ನ ಜೇಬಿನೊಳಗೆ ಭದ್ರವಾಗಿ ಇಟ್ಟುಕೊಂಡಿದ್ದ. ಈ ಅವಕಾಶ ಬಳಸಿ ಹರಿಗೆ ಕೆಟ್ಟ ಹೆಸರು ತಂದು, ಆತನನ್ನು ಅಂಗಡಿಯಿಂದ ಓಡಿಸಿ, ತಾನೊಬ್ಬನೇ ಮಜವಾಗಿ ಇರಬೇಕೆಂದು ಬಾಲು ಯೋಚಿಸಿದ. ಅಂದು ರಾತ್ರಿ ಅಂಗಡಿ ಬಾಗಿಲು ಮುಚ್ಚಿ ಇಬ್ಬರೂ ಊಟ ಮುಗಿಸಿ ಬಂದು ಮಲಗಿಕೊಂಡಿದ್ದರು. ಹರಿ ಗಾಢ ನಿದ್ರೆಗೆ ಜಾರಿದ್ದ. ಹೊಂಚು ಹಾಕುತ್ತಿದ್ದ ಬಾಲು ಆತನ ಜೇಬಿನಲ್ಲಿ ಇದ್ದ ಹಣದಲ್ಲಿ ಹತ್ತು ಸಾವಿರ ಎಗರಿಸಿ ಅದನ್ನು ತಂದು ಹರಿಯ ಪೆಟ್ಟಿಗೆಯಲ್ಲಿದ್ದ ಬಟ್ಟೆಗಳ ಮಧ್ಯ ಇಟ್ಟು ಮಲಗಿದ.

ಮರುದಿನ ವ್ಯಾಪಾರ ಆರಂಭಿಸಿದಾಗ ಮಾಲೀಕ ಮುನಿ ಊರಿನಿಂದ ಬಂದರು. ಹರಿಗೆ ಹಣ ಕೊಡಲು ಕೇಳಿದ. ಹರಿ ತನ್ನ ಜೇಬಿನಿಂದ ಅದನ್ನು ತೆಗೆದು ಮಾಲೀಕನ ಕೈಗೆ ಕೊಟ್ಟ. ಆತ ಅದನ್ನು ಎಣಿಕೆ ಮಾಡಿ ಹರಿ, ಹತ್ತು ಸಾವಿರ ಕಡಿಮೆ ಇದೆ ಎಂದು ಹೇಳಿದ್ದೇ ತಡ ಆತನ ಎದೆ ಧಸಕ್ ಎಂದು ಕಣ್ಣು ತುಂಬಿ ಬಂದವು. ಬಿಕ್ಕುತ್ತಲೆ ಸಾವುಕಾರ್ರೆ, ನಾನು ಸರಿಯಾಗಿ ತಂದು ನನ್ನ ಜೇಬಿನಲ್ಲೇ ಇಟ್ಟುಕೊಂಡು ಈಗ ತೆಗೆದಿದ್ದೇನೆ ಎಂದು ಅಳತೊಡಗಿದ್ದ. ಆಗ ಸ್ವಲ್ಪ ದೂರದಲ್ಲಿ ನಿಂತಿದ್ದ ಬಾಲು ಮಾಲೀಕನಿಗೆ ಸಂಜ್ಞೆ ಮೂಲಕ ಆ ಹಣ ಹರಿನೇ ತನ್ನ ಪೆಟ್ಟಿಗೆಯಲ್ಲಿ ಇಟ್ಟಿದ್ದು ತಾನು ನೋಡಿದ್ದೆ ಎಂದು ಸುಳ್ಳು ಹೇಳಿದ್ದ. ಆದರೆ, ಮುನಿ ಮನದಲ್ಲಿ ಛೇ...ಎಂದೂ ಈ ಹುಡುಗ ಇಂಥ ಕೆಲಸ ಮಾಡಿದವನೇ ಅಲ್ಲ. ಇಂದೇಕೆ ಹೀಗೆ ಮಾಡಿದ? ಎಂದು ಯೋಚಿಸುತ್ತಾ ‘ನಿಮ್ಮ ರೂಮಿಗೆ ಹೋಗಿ ಚೆಕ್ ಮಾಡಿ ಬರೋಣ’ ಎಂದ ಮುನಿ, ನೀವು ಮುಂದೆ ಹೋಗುತ್ತೀರಿ ನಾನು ನಿಮ್ಮ ಹಿಂದೆ ಬರುವೆ ಎಂದು ಅವರನ್ನು ಕಳುಹಿಸಿ ಕೊಟ್ಟ. ಆನಂತರ ಗಲ್ಲಾಪೆಟ್ಟಿಗೆ ಪಕ್ಕದಲ್ಲಿದ್ದ ತನ್ನ ರೂಮಿಗೆ ಬಂದು ಅಲ್ಲಿ ಹರಿಯ ರೂಮಿನೊಳಗೆ ಇಟ್ಟಿದ್ದ ಸಿ.ಸಿ.ಕ್ಯಾಮೆರಾದ ಕ್ಲಿಪ್ಪಿಂಗ್ ನೋಡಲಾರಂಭಿಸಿದ. ಬಾಲು ಮಾಡಿದ ಕುಕೃತ್ಯ ಹಾಗೂ ಸಂಬಂಧ ಸುಳ್ಳು ಹೇಳಿದ್ದು ಗೊತ್ತಾಯಿತು. ರೂಮಿನಲ್ಲಿ ಹರಿ ಬಿಕ್ಕುತ್ತ ನಿಂತಿದ್ದರೆ, ಬಾಲು ತನ್ನ ಪ್ಲಾನ್ ಫಲಿಸಿತು ಎಂದು ಒಳ ಒಳಗೇ ಆನಂದದಿಂದ ಕುಣಿಯುತ್ತಿದ್ದ. ಕೆಲ ನಿಮಿಷಗಳ ನಂತರ ರೂಮಿನೊಳಗೆ ಬಂದ ಸಾಹುಕಾರ ಸೀದಾ ಹರಿಯ ಪೆಟ್ಟಿಗೆ ತೆಗೆದು ಅದರಲ್ಲಿದ್ದ ಹಣ ತೆಗೆದುಕೊಂಡು ಏನೊಂದೂ ಮಾತನಾಡದೇ ಸಡನ್ನಾಗಿ ಬಾಲುವಿನ ಕತ್ತಿನ ಪಟ್ಟಿ ಹಿಡಿದು ಎಳೆತಂದು ಸಿ.ಸಿ. ಕ್ಯಾಮೆರಾದ ದೃಶ್ಯಾವಳಿ ತೋರಿಸಿದ. ■